ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002

ದೂರವಾಣಿ / Telephone: 0831-2407201, 0831-2407206, 0831-2407213

ಫ್ಯಾಕ್ಸ್/Fax: 0831-2429662

e-mail: ceozpbelgaum@yahoo.com


ವಿಷಯ : ಸನ್-2014-15 ನೇ ಸಾಲಿನಲ್ಲಿ ನಬಾರ್ಡ ಆರ್. ಐ. ಡಿ.ಎಫ್. XVII ರಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂ:ಗ್ರಾಅಪ-24/3/ಆರ್.ಆರ್.ಸಿ:2013 ದಿನಾಂಕ: 18-07-2013.
2. ಸರ್ಕಾರದ ಆದೇಶ ಸಂ:ಗ್ರಾಅಪ:24/4:ಆರ್ಆರ್‌ಸಿ:2013 ದಿನಾಂಕ: 22-08-2013.
3. ಈ ಕಾರ್ಯಾಲಯದ ಆದೇಶ ದಿನಾಂಕ: 27-09-2013.
4. ಸರ್ಕಾರದ ಆದೇಶ ಸಂ:ಗ್ರಾಅಪ:24/6:ಆರ್ಆರ್‌ಸಿ:2013 ದಿನಾಂಕ: 07-12-2013.
5. ಸರ್ಕಾರದ ಆದೇಶ ಸಂ:ಗ್ರಾಅಪ:24/7:ಆರ್ಆರ್‌ಸಿ:2013 ದಿನಾಂಕ: 06-03-2014.
6. ಈ ಕಾರ್ಯಾಲಯದ ಆದೇಶ ಸಂ:ಜಿಪಂ:ಅಭಿವೃದ್ಧಿ:RIDF-17:viv:120/11-12 ದಿನಾಂಕ: 12-03-2014.
7. ಸರ್ಕಾರದ ಆದೇಶ ಸಂ:ಗ್ರಾಅಪ:33:ಆರ್.ಆರ್.ಸಿ:2014 ಬೆಂಗಳೂರು ದಿನಾಂಕ:03-05-2014.

**ಪ್ರಸ್ತಾವನೆ :**

ಸರ್ಕಾರವು ಆರ್.ಐ.ಡಿ.ಎಫ್-17 ರ ಯೋಜನೆಯಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಬೆಳಗಾವಿ ಜಿಲ್ಲೆಗೆ ಅಂದಾಜು ಮೊತ್ತ ಒಟ್ಟು ರೂ. 1933.60 ಲಕ್ಷ ಅನುದಾನವನ್ನು ನಿಗದಿಪಡಿಸಿರುತ್ತಾರೆ. ಅದರಂತೆ ಅನುಮೋದಿತ 36 ಕಾಮಗಾರಿಗಳ ಪೈಕಿ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ / ಚಿಕ್ಕೋಡಿ ಇವರ ವರದಿ ಆಧಾರಿತ ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ ಬೆಳಗಾವಿ 10 ಕಾಮಗಾರಿ ಹಾಗೂ ಚಿಕ್ಕೋಡಿ ವಿಭಾಗಕ್ಕೆ 26 ಕಾಮಗಾರಿಗಳನ್ನು ನಿಗದಿಪಡಿಸಿರುವ ಪೈಕಿ ಓದಲಾದ (6) ರಡಿ ಈ ಕಾರ್ಯಾಲಯದಿಂದ ಇಲ್ಲಿಯವರೆಗೆ ರೂ. 1418.96 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಬಾಕಿ ಉಳಿದಿರುವ ಪೈಕಿ ಓದಲಾದ (7)ರ ಸರ್ಕಾರದ ಆದೇಶದಡಿ ಪ್ರಥಮ ತ್ರೈಮಾಸಿಕ ಕಂತಿನ ಅನುದಾನ ರೂ. 200.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ. ಅದರಂತೆ ಬಿಡುಗಡೆಯಾಗಿರುವ ಅನುದಾನವನ್ನು ಈ ಕೆಳಗೆ ತೋರಿಸಿರುವ ಅಂಕಣದಲ್ಲಿಯಂತೆ ಎರಡು ವಿಭಾಗಗಳಿಗೆ ಹಂಚಿಕೆ ಮಾಡಿ ಮರು ಬಿಡುಗಡೆ ಮಾಡಬೇಕಾಗಿರುದರಿಂದ ಈ ಆದೇಶ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿಭಾಗದ ಹೆಸರು | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ಇಲ್ಲಿಯವರೆಗೆ ಬಿಡುಗಡೆ ಮಾಡಿದ ಮೊತ್ತ | ಈ ಆದೇಶದಲ್ಲಿ ಬಿಡುಗಡೆ ಮಾಡಿದ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಳಗಾವಿ | 10 | 893.60 | 517.624 | 100.00 |
| 2 | ಚಿಕ್ಕೋಡಿ | 26 | 1040.00 | 901.336 | 100.00 |
| | **ಒಟ್ಟು** | **36** | **1933.60** | **1418.96** | **200.00** |

ಕ್ರಸಂ:ಜಿಪ/ಅಭಿವೃದ್ದಿ/ರ.ಕಾ/ವಿವ- /14-15 ದಿನಾಂಕ: -05-2014.
07-6-14

# ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ನಬಾರ್ಡ ಆರ್.ಐ. ಡಿ.ಎಫ್. XVII ರಡಿ ಲೆಕ್ಕ ಶಿರ್ಷಿಕೆ 5054-03-337-0-74-436 ರಡಿ ಹಂಚಿಕೆ ಮಾಡಿದ ರೂ. 1933.60 ಲಕ್ಷಗಳ ಒಟ್ಟು ಅಂದಾಜು ಮೊತ್ತಕ್ಕೆ 36 ಕಾಮಗಾರಿಳಿಗಾಗಿ ಪ್ರಥಮ ತ್ರೈಮಾಸಿಕ ಅವಧಿಗೆ ಸರ್ಕಾರದಿಂದ ಬಿಡುಗಡೆ ಮಾಡಿದ ರೂ. 200.00 ಲಕ್ಷ ಅನುದಾನವನ್ನು ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ ಬೆಳಗಾವಿ ಇವರಿಗೆ 10 ಕಾಮಗಾರಿಗಳಿಗೆ ರೂ. 100.00 ಲಕ್ಷ ಹಾಗೂ ಚಿಕ್ಕೋಡಿ ವಿಭಾಗಕ್ಕೆ 26 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ. 100.00 ಲಕ್ಷ ಅನುದಾನವನ್ನು ಈ ಕೆಳಗೆ ತೋರಿಸಿದಂತೆ ಬಿಡುಗಡೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿಭಾಗದ ಹೆಸರು | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ಇಲ್ಲಿಯವರೆಗೆ ಬಿಡುಗಡೆ ಮಾಡಿದ ಮೊತ್ತ | ಈ ಆದೇಶದಲ್ಲಿ ಬಿಡುಗಡೆ ಮಾಡಿದ ಮೊತ್ತ |
|---|---|---|---|---|---|
| 1 | 2 | 3 | 4 | 5 | 6 |
| 1 | ಬೆಳಗಾವಿ | 10 | 893.60 | 517.624 | 100.00 |
| 2 | ಚಿಕ್ಕೋಡಿ | 26 | 1040.00 | 901.336 | 100.00 |
| | **ಒಟ್ಟು** | **36** | **1933.60** | **1418.96** | **200.00** |

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರು ಅಂಕಣ ಸಂಖ್ಯೆ (6)ರಲ್ಲಿ ತೋರಿಸಿರುವಂತೆ ಬಿಡುಗಡೆ ಮಾಡತಕ್ಕದ್ದು. ಅನುಷ್ಠಾನಾಧಿಕಾರಿಗಳಾದ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ / ಚಿಕ್ಕೋಡಿ ಇವರು ಈ ಕೆಳಗಿನ ಷರತ್ತುಗಳಿಗೊಳಪಟ್ಟು ಅನುದಾನವನ್ನು ವಿನಿಯೋಗಿಸತಕ್ಕದ್ದು.

**ಷರತ್ತುಗಳು**

1. ಈ ಅನುದಾನವನ್ನು ಅನುಮೋದನೆಯಾದ ನಬಾರ್ಡ ಮಾಲಿಕೆಯ ಕಾಮಗಾರಿಯ ಹೊರತು ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸಬಾರದು. ಮುಂದುವರೆಯುತ್ತಾ ಯಾವುದೇ ನಬಾರ್ಡ ಮಾಲಿಕೆಯಡಿ ಕಾಮಗಾರಿಗಳು ಅನುಮೋದನೆಗೊಂಡಿದ್ದಲ್ಲಿ, ಇನ್ಯಾವುದೇ ಮಾಲಿಕೆಯಡಿ ಬಿಡುಗಡೆಗೊಳಿಸಲಾಗಿರುವ ಅನುದಾನವನ್ನು ಅವಶ್ಯಕತೆ ಹಾಗೂ ಆದ್ಯತೆ ಮೇರೆಗೆ ವಿನಿಯೋಗಿಸಲು ಅವಕಾಶ ಕಲ್ಪಿಸಲಾಗಿದೆ.
2. ಜಿಲ್ಲಾ ಪಂಚಯತಿಗಳು ಮುಂದಿನ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಬೇಡಿಕೆ ಸಲ್ಲಿಸುವ ಮುನ್ನ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಶೇ. 75 ರಷ್ಟು ವೆಚ್ಚ ಕಡ್ಡಾಯವಾಗಿ ಭರಿಸತಕ್ಕದ್ದು, ಇಲ್ಲದಿದ್ದಲ್ಲಿ ಮುಂದಿನ ಕಂತಿನ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.
3. ಈ ಕಾರ್ಯಕ್ರಮದಡಿ ಬಿಡುಗಡೆ ಮಾಡಿದ ಅನುದಾನದಲ್ಲಿ ಭರಿಸಿದ ವೆಚ್ಚಕ್ಕೆ ಅನುಗುಣವಾಗಿ ನಬಾರ್ಡ ಮರು ಪಾವತಿ ಕ್ಲೈಮ್ ಬಿಲ್ಲುಗಳ ರಸ್ತೆ ಸೇತುವೆ ಕಾಮಗಾರಿಗಳಿಗೆ ಸಲ್ಲಿಸತಕ್ಕದ್ದು.
4. ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿಯನ್ನು ಮುಖ್ಯ ಇಂಜನೀಯರ್, ಪಂಚಾಯತ ರಾಜ್ ಇಂಜಿನಿಯರಿಂಗ್ ಇಲಾಖೆ ಇವರಿಗೆ ಒದಗಿಸತಕ್ಕದ್ದು.
5. ಕಾಮಗಾರಿಗಳ ವಿವರಗಳನ್ನು ನಬಾರ್ಡನ ನಿಯಮಗಳಂತೆ ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ಹಾಗೂ ಕಾಮಗಾರಿಗಳನ್ನು ನಡೆಸುತ್ತಿರುವ ಸ್ಥಳಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು. ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ವಿವರಗಳನ್ನು ಬರೆಸುವ ಜವಾಬ್ದಾರಿ ಆಯಾ ಜಿಲ್ಲಾ ಪಂಚಾಯತಿಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳದ್ದಾಗಿರುತ್ತದೆ.
6. ಬಳಕೆಯಾದ ಹಣ ಕುರಿತಂತೆ ಈ ಯೋಜನೆಯಡಿಯ ಎಲ್ಲಾ ಕಾಮಗಾರಿಗಳ Project Completion Report ನ್ನು ಸರ್ಕಾರಕ್ಕೆ ಹಾಗೂ ಮುಖ್ಯ ಇಂನಿನಿಯರ್, ಪಂಚಾಯತ ರಾಜ್ ಇಂಜಿನಿಯರಿಂಗ್ ಇಲಾಖೆ ಇವರಿಗೆ ಒದಗಿಸತಕ್ಕದ್ದು.

(ದೀಪ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

ZILLA PANCHAYAT OFFICE, BELGAUM-590002

ದೂರವಾಣಿ Telephone 0831-2407201, 0831-2407206, 0831-2407213

ಫ್ಯಾಕ್ಸ್/Fax 0831-2429662

e-mail ceozpbelgaum@yahoo.com

ವಿಷಯ : ಸನ್-2014-15 ನೇ ಸಾಲಿನಲ್ಲಿ ನಬಾರ್ಡ ಆರ್. ಐ. ಡಿ.ಎಫ್. XVIII ರಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:1) ಸರ್ಕಾರದ ಆದೇಶ ಸಂ: ಆರ್‌ಡಿಪಿ:149:ಆರ್‌ಆರ್‌ಸಿ:2012 ದಿನಾಂಕ: 25-03-2013.

2) ಸರ್ಕಾರದ ಆದೇಶ ಸಂ:ಗ್ರಾಅಪ:33:ಆರ್.ಆರ್.ಸಿ:2014 ಬೆಂಗಳೂರು ದಿನಾಂಕ:03-05-2014.

**ಪ್ರಸ್ತಾವನೆ :**

ಓದಲಾದ (1) ರ ಸರ್ಕಾರದ ಆದೇಶದಲ್ಲಿ ಆರ್. ಐ. ಡಿ.ಎಫ್. XVIII ರಡಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ರೂ. 265.00 ಲಕ್ಷ ಅಂದಾಜು ಮೊತ್ತವನ್ನು ನಿಗದಿಪಡಿಸಿ ಒಟ್ಟು 5 ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಿರುತ್ತಾರೆ. ಅದರಂತೆ ಆಡಳಿತಾತ್ಮಕ ಮಂಜೂರಾತಿ ನೀಡಿದ ಸದರಿ 5 ಕಾಮಗಾರಿಗಳಿಗೆ ಪ್ರಸಕ್ತ ಸನ್-2014-15 ನೇ ಸಾಲಿಗೆ ಓದಲಾದ(2) ರ ಸರ್ಕಾರದ ಆದೇಶದಲ್ಲಿ ಪ್ರಥಮ ತ್ರೈಮಾಸಿಕ ಅನುದಾನ ರೂ. 50.00 ಲಕ್ಷ ಅನುದಾನ ಬಿಡುಗಡೆ ಮಾಡಿ ಆದೇಶಿಸಿರುತ್ತಾರೆ. ಬಿಡುಗಡೆ ಮಾಡಿರುವ ಅನುದಾನವನ್ನು ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿಗೆ ಒಂದು ಕಾಮಗಾರಿಗೆ ಅನುದಾನ ರೂ. 10.00 ಲಕ್ಷ ಹಾಗೂ ಚಿಕ್ಕೋಡಿ ವಿಭಾಗಕ್ಕೆ 4 ಕಾಮಗಾರಿಗೆ ರೂ. 40.00 ಲಕ್ಷ ಅನುದಾನ ಸೇರಿ ಒಟ್ಟು ರೂ. 50.00 ಲಕ್ಷ ಅನುದಾನವನ್ನು ಈ ಕಾರ್ಯಾಲಯದಿಂದ ಮರು ಬಿಡುಗಡೆ ಮಾಡಲು ಈ ಆದೇಶ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿಭಾಗದ ಹೆಸರು | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ಸನ್-2014-15 ನೇ ಸಾಲಿನಲ್ಲಿ ಬಿಡುಗಡೆ ಮಾಡಬೇಕಾದ ಅನುದಾನ |
|---|---|---|---|---|
| 1 | 2 | 3 | 4 | 5 |
| 1 | ಬೆಳಗಾವಿ | 1 | 265.00 | 10.00 |
| 2 | ಚಿಕ್ಕೋಡಿ | 4 | | 40.00 |
| | **ಒಟ್ಟು** | 5 | **265.00** | **50.00** |

ಕ್ರ.ಸಂ:ಜಿಪಂ/ಅಭಿವೃದ್ಧಿ/ರ.ಕಾ/ವಿವ- /14-15 ದಿನಾಂಕ: -05-2014. 07-6-14

ರವಾನಿಸಿದೆ ದಿ: 11 JUN 2014

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ನಬಾರ್ಡ ಆರ್.ಐ. ಡಿ.ಎಫ್. XVIII ರಡಿ ಲೆಕ್ಕ ಶಿರ್ಷಿಕೆ 5054-03-337-0-74-436 ರಡಿ ಬೆಳಗಾವಿ ಜಿಲ್ಲೆಯ 5 ಕಾಮಗಾರಿಗಳಿಗೆ ರೂ. 265.00 ಲಕ್ಷಗಳ ಅನುದಾನ ನಿಗದಿಪಡಿಸಿರುತ್ತಾರೆ. ನಿಗದಿಪಡಿಸಿರುವ ಅನುದಾನದ ಪೈಕಿ ಪ್ರಸಕ್ತ ಸಾಲಿನಲ್ಲಿ ಸರ್ಕಾರದಿಂದ ಪ್ರಥಮ ತ್ರೈಮಾಸಿಕ ಅನುದಾನ ರೂ. 50.00 ಲಕ್ಷಗಳನ್ನು ಬಿಡುಗಡೆ ಮಾಡಿರುವುದನ್ನು ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ ಬೆಳಗಾವಿ ಇವರಿಗೆ 1 ಕಾಮಗಾರಿಗೆ ರೂ. 10.00 ಲಕ್ಷ ಹಾಗೂ ಚಿಕ್ಕೋಡಿ ವಿಭಾಗಕ್ಕೆ 4 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ. 40.00 ಲಕ್ಷ ಅನುದಾನವನ್ನು ಒಟ್ಟು 5 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಈ ಕೆಳಗೆ ತೋರಿಸಿದಂತೆ ಬಿಡುಗಡೆ ಮಾಡಲಾಗಿದೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ವಿಭಾಗದ ಹೆಸರು | ಕಾಮಗಾರಿಗಳ ಸಂಖ್ಯೆ | ಅಂದಾಜು ವೆಚ್ಚ | ಸನ್-2014-15 ನೇ ಸಾಲಿನಲ್ಲಿ ಬಿಡುಗಡೆ ಮಾಡಬೇಕಾದ ಅನುದಾನ |
|---|---|---|---|---|
| 1 | 2 | 3 | 4 | 5 |
| 1 | ಬೆಳಗಾವಿ | 1 | 265.00 | 10.00 |
| 2 | ಚಿಕ್ಕೋಡಿ | 4 | | 40.00 |
| | ಒಟ್ಟು | 5 | 265.00 | 50.00 |

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರು ಅಂಕಣ ಸಂಖ್ಯೆ (5)ರಲ್ಲಿ ತೋರಿಸಿರುವಂತೆ ಬಿಡುಗಡೆ ಮಾಡತಕ್ಕದ್ದು. ಅನುಷ್ಠಾನಾಧಿಕಾರಿಗಳಾದ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ / ಚಿಕ್ಕೋಡಿ ಇವರು ಈ ಕೆಳಗಿನ ಷರತ್ತುಗಳಿಗೊಳಪಟ್ಟು ಅನುದಾನವನ್ನು ವಿನಿಯೋಗಿಸತಕ್ಕದ್ದು.

**ಷರತ್ತುಗಳು**

1. ಈ ಅನುದಾನವನ್ನು ಅನುಮೋದನೆಯಾದ ನಬಾರ್ಡ ಮಾಲಿಕೆಯ ಕಾಮಗಾರಿಯ ಹೊರತು ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸಬಾರದು. ಮುಂದುವರೆಯುತ್ತಾ ಯಾವುದೇ ನಬಾರ್ಡ ಮಾಲಿಕೆಯಡಿ ಕಾಮಗಾರಿಗಳು ಅನುಮೋದನೆಗೊಂಡಿದ್ದಲ್ಲಿ, ಇನ್ನ್ಯಾವುದೇ ಮಾಲಿಕೆಯಡಿ ಬಿಡುಗಡೆಗೊಳಿಸಲಾಗಿರುವ ಅನುದಾನವನ್ನು ಅವಶ್ಯಕತೆ ಹಾಗೂ ಆದ್ಯತೆ ಮೇರೆಗೆ ವಿನಿಯೋಗಿಸಲು ಅವಕಾಶ ಕಲ್ಪಿಸಲಾಗಿದೆ.
2. ಜಿಲ್ಲಾ ಪಂಚಯತಿಗಳು ಮುಂದಿನ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಬೇಡಿಕೆ ಸಲ್ಲಿಸುವ ಮುನ್ನ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಶೇ. 75 ರಷ್ಟು ವೆಚ್ಚ ಕಡ್ಡಾಯವಾಗಿ ಭರಿಸತಕ್ಕದ್ದು, ಇಲ್ಲದಿದ್ದಲ್ಲಿ ಮುಂದಿನ ಕಂತಿನ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.
3. ಈ ಕಾರ್ಯಕ್ರಮದಡಿ ಬಿಡುಗಡೆ ಮಾಡಿದ ಅನುದಾನದಲ್ಲಿ ಭರಿಸಿದ ವೆಚ್ಚಕ್ಕೆ ಅನುಗುಣವಾಗಿ ನಬಾರ್ಡ ಮರು ಪಾವತಿ ಕ್ಲೈಮ್ ಬಿಲ್ಲುಗಳ ರಸ್ತೆ ಸೇತುವೆ ಕಾಮಗಾರಿಗಳಿಗೆ ಸಲ್ಲಿಸತಕ್ಕದ್ದು.
4. ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿಯನ್ನು ಮುಖ್ಯ ಇಂಜನೀಯರ್ , ಪಂಚಾಯತ ರಾಜ್ ಇಂಜಿನಿಯರಿಂಗ್ ಇಲಾಖೆ ಇವರಿಗೆ ಒದಗಿಸತಕ್ಕದ್ದು.
5. ಕಾಮಗಾರಿಗಳ ವಿವರಗಳನ್ನು ನಬಾರ್ಡನ ನಿಯಮಗಳಂತೆ ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ಹಾಗೂ ಕಾಮಗಾರಿಗಳನ್ನು ನಡೆಸುತ್ತಿರುವ ಸ್ಥಳಗಳಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು. ಗ್ರಾಮ ಪಂಚಾಯತಿಯ ಸೂಚನಾ ಫಲಕಗಳಲ್ಲಿ ವಿವರಗಳನ್ನು ಬರೆಸುವ ಜವಾಬ್ದಾರಿ ಆಯಾ ಜಿಲ್ಲಾ ಪಂಚಾಯತಿಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳದ್ದಾಗಿರುತ್ತದೆ.
6. ಬಳಕೆಯಾದ ಹಣ ಕುರಿತಂತೆ ಈ ಯೋಜನೆಯಡಿಯ ಎಲ್ಲಾ ಕಾಮಗಾರಿಗಳ Project Completion Report ನ್ನು ಸರ್ಕಾರಕ್ಕೆ ಹಾಗೂ ಮುಖ್ಯ ಇಂಜನೀಯರ್ , ಪಂಚಾಯತ ರಾಜ್ ಇಂಜಿನಿಯರಿಂಗ್ ಇಲಾಖೆ ಇವರಿಗೆ ಒದಗಿಸತಕ್ಕದ್ದು.

(ದೀಪ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**

1) ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ.
2) ಮುಖ್ಯ ಯೋಜನಾಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ.
3) ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ /ಚಿಕ್ಕೋಡಿ
4) ಜಿಲ್ಲೆಯ ಎಲ್ಲ ಸಹಾಯಕ ಕಾರ್ಯಕಾರಿ ಅಭಿಯಂತರರು ಪಂ.ರಾ.ಇಂ ಉಪ ವಿಭಾಗ

---

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ